

ಅವನು ಕೇಳಿಸಿಕೊಳ್ಳುವ ಮಾತೂ ಕೂಡ ನನ್ನವೇ ಎಂದು ಅಂದೂ ಅನಿಸುತ್ತಿತ್ತು; ಇಂದೂ ಅನಿಸುತ್ತಿದೆ.

ತಾನು ಇಷ್ಟಪಡುತ್ತಿರುವ ಹುಡುಗಿಯನ್ನು ಯಾವ ಕಾರಣಕ್ಕಾಗಿ ಇಷ್ಟಪಡುತ್ತಿದ್ದೇನೆ ಎಂಬ ಜಿಜ್ಞಾಸೆಯಲ್ಲಿಯೇ ಅಕಾಲಿಕ ಮುಪ್ಪಡರಿಸಿಕೊಳ್ಳುವ ನಾಯಕ. ಕಾಮಿನಿಯನ್ನು ಮೆಚ್ಚಿದ್ದು ದೇಹಕ್ಕಾಗೋ? ಪ್ರೀತಿಗಾಗಿಯೋ? ಡಾಲಿಯ ಜೊತೆ ಮಲಗಿದ್ದು ಪ್ರೇಮಕ್ಕೋ ಕಾದ ಕಾಮಕ್ಕೋ? ಮತ್ತು ತನ್ನ ಬಳಿ ಬಂದ ಶಶಿಕಲಾ ಏನನ್ನು ಬಯಸಿ ಬಂದಳು? ಇಂತಹವೆಲ್ಲ ಪ್ರಶ್ನೆಗಳನ್ನು ಕೇಳಿಕೊಳ್ಳುವ ಈ ಗೌರೀಶನ ಮನಸ್ಸೇ ಗಾಂಧಿಬಜಾರು. ಒಬ್ಬ ವ್ಯಕ್ತಿ ತನ್ನ ಬಾಳಿನ ಆಗುಹೋಗುಗಳಿಗೆಲ್ಲಾ ತಾತ್ವಿಕವಾದ ಕಾರಣ ಮತ್ತು ಅರ್ಥವನ್ನು ಹುಡುಕಹೊರಟಾಗ ಆಗುವ ಅಪಾಯಗಳನ್ನು ಗೌರೀಶ ಎದುರಿಸುತ್ತಾನೆ. ಸರಳವಾಗಿ ಬಾಳೋಕೇ ಬಾರದ ಚಿತ್ತ ಅವನದ್ದು ಎಂದು ಅನಿಸುತ್ತದೆ. ಎಲ್ಲ ಸಮಸ್ಯೆಗಳ ಮೂಲ ಮನುಷ್ಯನ ಚಿಂತನೆಗಳೇ ಎಂದು ನಂಬುವುದಾದರೆ ಅದಕ್ಕೊಂದು ಒಳ್ಳೆಯ ಉದಾಹರಣೆ ಇವನು.

ಪ್ರೇಮ ಎನ್ನುವುದು ಸರಿಯಾದ ಸನ್ನಿವೇಶದಲ್ಲಿ ಸಂದರ್ಭದಲ್ಲಿ ಸಂಭವಿಸಿದರೆ ಅದಕ್ಕೆ ಕಾರಣ, ಅರ್ಥ ಮತ್ತು ಉದ್ದೇಶ ಇರುತ್ತದೆ. ಕಂಡ ಕಂಡ ಹೆಣ್ಣುಗಳೆಲ್ಲ ನನ್ನ ಪ್ರೇಮಕ್ಕೆ ಅರ್ಹರು ಎಂದೋ ಅಥವಾ ಅವರನ್ನು ಲಾಭದ ದೃಷ್ಟಿಯಿಂದಲೇ ನೋಡುವ ಮನಸ್ಥಿತಿ ಸೃಷ್ಟಿಯಾದರೆ ಅದು ಅಪಾಯಕಾರಿ. ತಾರುಣ್ಯದ ಈ 'ಸಮಸ್ಯೆ' ಮನಸ್ಸನ್ನು ಚಂಚಲಗೊಳಿಸುತ್ತದೆ. ಆಗ ನಿರ್ಧಾರಗಳನ್ನು ಕೈಗೊಳ್ಳುವುದರಲ್ಲಿ ಪರಾವಲಂಬಿ ಆಗಬೇಕಾಗುತ್ತದೆ. ಚಿತ್ತವನ್ನು ಕನಲಿಸುವ ಎರಡು ಸಂಗತಿಗಳಾದ ಪ್ರೇಮ ಮತ್ತು ಸಾವುಗಳ ನಡುವೆ ಓದು-ಬರಹ, ಪರೀಕ್ಷೆ, ಅಂಕ, ಹುದ್ದೆ, ಹಣ ಎಲ್ಲವೂ ಸಾಗುತ್ತದೆ. ಎರಡೂ ಕೂಡ ಮುಕ್ತಿಯನ್ನು ಬಿತ್ತುತ್ತವೆ. ಒಂದು ಮನೋಕಾಮನೆಯಿಂದ ಮುಕ್ತಿಯನ್ನು ಕೊಟ್ಟರೆ, ಮತ್ತೊಂದು ದೇಹದಿಂದ ಮುಕ್ತಿಯನ್ನು ಕೊಡುತ್ತದೆ. ಗೌರೀಶನ ತುಯ್ದಾಟ ಇದೇ. ಹೆಣ್ಣನ್ನು ಪ್ರೀತಿಸಿದ ಕಾರಣಕ್ಕೆ ಅವಳ ದೇಹವನ್ನು ಬಯಸುವಿಕೆ ಮತ್ತು ದೇಹ ದಾಹದಿಂದ ಅತೀತಗೊಂಡ ವಿಲೋಮ ಸಂಬಂಧ ಸಾಧ್ಯವೇ ಇಲ್ಲವೇ ಎಂಬ ನಿರುತ್ತರ. ಶಾಂತಿನಾಥರ ಈ ಆಲೋಚನೆಗಳು ಗೌರೀಶ ಎಂಬ ಪಾತ್ರದ ಮೂಲಕ ರೂಪು ಪಡೆದಿವೆ. ಇದು